**ಎಂವಿಸಿಃ 1702/2023 ಪಿಡಬ್ಲ್ಯು: 1 ಪರಮೇಶ್ವರ**

**ಸಾಕ್ಷಿಯನ್ನು ದಿಃ 17.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜೆ.ಎಸ್.ಕೆ ವಕೀಲರಿಂದಃ**

ಅಪಘಾತವನ್ನು ನಾನು ನೋಡಿಲ್ಲ. ಅಪಘಾತ ಸ್ಥಳದಿಂದ ನಮ್ಮ ಮನೆ 28 ಕಿ.ಮೀ ಇದೆ. ನನ್ನ ಮಗನನ್ನು ಸ್ಥಳೀಯ ಊರಿನವರು ಆಸ್ಪತ್ರೆಗೆ ಸೇರಿಸಿದ್ದಾರೆ. ಪೋಲೀಸರಿಗೆ ದೂರು ನಾನೇ ನೀಡಿದ್ದೇನೆ. ಅಪಘಾತ ಆಗುವಾಗ ನನ್ನ ಮಗನೊಟ್ಟಿಗೆ ಬೇರೆ ಯಾರು ಇರಲಿಲ್ಲ. ದೋಷರೋಪಣಾ ಪಟ್ಟಿಯ 2 ನೇ ಆರೋಪಿ ನನ್ನ ಮಗ. ಸದರಿ ದೋಷರೋಪಣಾ ಪಟ್ಟಿಯನ್ನು ನಾನು ಪ್ರಶ್ನಿಸಿಲ್ಲ. 1 ನೇ ಆರೋಪಿ ಈ ಅರ್ಜಿಯ 1 ನೇ ಅರ್ಜಿದಾರ. ಆತನಿಗೂ ಡಿ.ಎಲ್ ಇಲ್ಲ ಎಂದು ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ಮಗ ಚಲಾಯಿಸುತ್ತಿದ್ದ ಬೈಕ್ ನನ್ನ ಮಗನಿಗೆ ಸೇರಿದ್ದು. ನನ್ನ ಮಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರಲಿಲ್ಲ. ನನ್ನ ಮಗನ ಹೆಸರಿನಲ್ಲಿ ಬ್ಯಾಂಕ್ ಖಾತೆ ಇತ್ತು. ಆತನ ಸಂಬಳ ಅವನ ಖಾತೆಗೆ ಜಮಾ ಆಗುತ್ತಿತ್ತು. ಸ್ಟೇಟ್ಮೆಂಟ್ ಹಾಜರು ಪಡಿಸಲು ತೊಂದರೆ ಇಲ್ಲ. ನಿಪಿ. 11 ಅನ್ನು ಈ ಅರ್ಜಿಗಾಗಿ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ನಾವು ಹೇಳಿದಂತೆ ಸಂಪಾದನೆ ಮಾಡುತ್ತಿರಲಿಲ್ಲ ಆದ ಕಾರಣ ಆತನ ಬ್ಯಾಂಕ್ ಸ್ಟೇಟ್ಮೆಂಟ್ ಅನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಿದ್ದಚಾರಿಗೆ ಸ್ವಲ್ಪ ಗಾಯ ಆಗಿದೆ ಎಂದು ಪೋಲೀಸರಿಂದ ತಿಳಿಯಿತು. ಅಪಘಾತದ ನಂತರ 1 ನೇ ಎದುರುದಾರರು ಬೇಟಿ ಮಾಡಿಲ್ಲ. ವಿಮಾ ಕಂಪನಿಯವರು ಬಂದು ಮೃತರ ಆಧಾರ್ ಕಾರ್ಡ್ ದಾಖಲೆಗಳನ್ನು ತೆಗೆದುಕೊಂಡಿರುತ್ತಾರೆ.

2. ಅಪಘಾತ ಸ್ಥಳವನ್ನು ನಾನು ನೋಡಿಲ್ಲ. ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಕೆ.ಆರ್ ಆಸ್ಪತ್ರೆಗೆ ಹೋಗಿದ ಅರ್ಧ ಗಂಟೆಯಲ್ಲಿ ಮಗ ತೀರಿದ್ದಾನೆ. ಅಪಘಾತ ನನ್ನ ಮಗನ ತಪ್ಪಿನಿಂದ ಆಗಿರುವ ಕಾರಣ ಎದುರುದಾರರು ಪರಿಹಾರ ಕೊಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ವಾಹನ ಚಾಲನ ಪರವಾನಗಿ ಇಲ್ಲದೇ ಇರುವ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.